ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಎಕ್ಸಿಕ್ಯುಟಿವ್ ಇಂಜಿನಿಯರ್ ಮಂಡ್ಯ ಇವರಿಗೆ 11,87,350 ರೂಪಾಯಿಗಳನ್ನು, ವಿಶ್ವೇಶ್ವರಯ್ಯ ಕೆನಾಲ್ ಡಿವಿಷನ್‌ಗೆ 6,25,483 ರೂಪಾಯಿಗಳನ್ನು ಕೊಟ್ಟಿದೆ.

ಶ್ರೀಮತಿ ದಮಯಂತಿ ಬೋರೇಗೌಡ :—ಕೆ. ಆರ್. ಎಸ್. ಡಿವಿಷನ್‌ಗೆ ದುಡ್ಡು ಒದಗಿಸಿಲ್ಲ ಎನ್ನುವುದರಿಂದ ಅಲ್ಲಿಯ ಕೆಲಸಕಾರ್ಯಗಳು ಆಗಿಲ್ಲ ಎಂದು ತಮ್ಮ ಗಮನಕ್ಕೆ ಬಂದಿದೆಯೇ ? ಶ್ರೀರಂಗಪಟ್ಟಣ ತಾಲ್ಲೂಕಿಗೆ ಈ ವರ್ಷವಾದರೂ ಹೆಚ್ಚಿಗೆ ದುಡ್ಡನ್ನು ಒದಗಿಸಿಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಡಿಪಾರ್ಟ್‌ಮೆಂಟಿಗೆ ಒದಗಿಸದೆ ಇರಬಹುದು, ಬೇರೆ ಬಾಬಿನಿಂದ ಅಲ್ಲಲ್ಲಿ ಖರ್ಚಾಗಿದೆ. ತಮಗೆ ವಿವರವಾಗಿ ಹೇಳುವುದಾದರೆ 64ರ ಫ್ಯಾಮಿನ್‌ನಲ್ಲಿ 32 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಐ. ಎನ್. ಇ. ಡಿ ವರ್ಕ್ಸ್‌ಗೆ 40,389 ರೂಪಾಯಿಗಳು, ರೂರಲ್ ಡೆವೆಲಪ್‌ಮೆಂಟ್ 2,38,190 ರೂಪಾಯಿಗಳು, ಕ್ಯಾಷ್ ಪ್ರೋಗ್ರಾಂನಲ್ಲಿ 5,02,137 ರೂಪಾಯಿಗಳು ಖರ್ಚಾಗಿದೆ. ಮತ್ತೆ ಎಜುಕೇಷನ್ ಡಿಪಾರ್ಟ್‌ಮೆಂಟಿನ ಕೆಲವು ವರ್ಕ್ಸ್, ಪಿ. ಆರ್. ವರ್ಕ್ಸ್‌ಗೆ ಖರ್ಚಾಗಿರುವುದು 39,887 ರೂಪಾಯಿ, ಇಂಟೆನ್‌ಸೀವ್ ಏರಿಯಾ ಡೆವೆಲಪ್‌ಮೆಂಟ್ ಪ್ರೋಗ್ರಾಂ 27,560 ರೂಪಾಯಿಗಳು ಖರ್ಚಾಗಿದೆ. ಆ ವಿವರಗಳು ತಾಲ್ಲೂಕು ವೈಸ್ ಬೇರೆ ಇದೆ. ಆ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ :—ತಮ್ಮ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾಗಮಂಗಲದಲ್ಲಿ ಯಾವ ಕಾರಣದಿಂದ ನಾಲ್ಕು ಲಕ್ಷ ರೂಪಾಯಿ ಕೊಟ್ಟಿದ್ದೀರಿ ಮತ್ತು ಚನ್ನರಾಯಪಟ್ಟಣಕ್ಕೆ 14-15 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ ಕಾರಣ ಏನು ಎಂದು ಹೇಳುವದಕ್ಕೆ ಆಗುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಒಟ್ಟು ರಾಜ್ಯದಲ್ಲಿಯಂ ಎಲ್ಲಾ ಜಿಲ್ಲೆಗಳಿಗೆ ಹಣವನ್ನು ಹಂಚಿ, ಜಿಲ್ಲಾವಾರು ಆದ ಮೇಲೆ ತಾಲ್ಲೂಕುವಾರು ಹಂಚತಕ್ಕ ಡೆಪ್ಯುಟಿ ಕಮೀರ್ಷನರವರು ಅಲ್ಲಿಯ ಪರಿಸ್ಥಿತಿಯನ್ನು ನೋಡಿ ಹಂಚಿದ್ದಾರೆ. ಹಾಸನ ಜಿಲ್ಲೆಯಲ್ಲಿ ಹೆಚ್ಚಿನ ಅಭಾವ ಇದ್ದುದರಿಂದ ಹೆಚ್ಚಾಗಿ ಅಲಾಟ್ ಮಾಡಿರಬಹುದು. ಚನ್ನರಾಯಪಟ್ಟಣ ಆಕ್ಕಪಕ್ಕದ ಭಾಗಗಳಲ್ಲಿ ಅಭಾವ ಪರಿಸ್ಥಿತಿ ಇರಬಹುದು, ಅಲ್ಲಿ ಪರಿಸ್ಥಿತಿಗಳು ಬಹಳ ಅವಶ್ಯಕವಾಗಿ ಕಂಡುಬಂದುದರಿಂದ ಅಲ್ಲಿ ಕೊಟ್ಟಿರಬಹುದು.

ಶ್ರೀಮತಿ ದಮಯಂತಿ ಬೋರೇಗೌಡ :—ಒಟ್ಟಿನಲ್ಲಿ ಆನೆಕಲ್, ಮಂಡ್ಯ, ಜಿಲ್ಲೆಯಲ್ಲಿ, ವಿಶೇಷವಾಗಿ ಶ್ರೀರಂಗಪಟ್ಟಣ, ಪಾಂಡವಪುರ ತಾಲ್ಲೂಕುಗಳಿಗೆ ಅನ್ಯಾಯವಾಗಿದೆಂದು ಒಪ್ಪಿಕೊಳ್ಳುತ್ತೀರೋ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಹಣ ಹಂಚಿರುವುದು, ಖರ್ಚಾಗಿರುವುದನ್ನು ತಿಳಿಸಿದ್ದಾರೆ. ಅನ್ಯಾಯವಾಗಿದ್ದು ಎಲ್ಲಿ ಎನ್ನುವುದನ್ನು ತೀರ್ಮಾನಕ್ಕೆ ಬರುವುದು ಮಾನ್ಯ ಸದಸ್ಯರಿಗೆ ಬಿಟ್ಟಿದ್ದು.

## RELIEF PROVIDED TO THE PEOPLE AFFECTED BY THE CHICKAHOLE TRAGEDY

761. Sri M. SIDDAMADAIAH (Kollegal) :—

Will the Minister for Revenue be pleased to state :—

(*a*) the relief provided so far to the people of Kollegal, Yelandur and Chamarajanagar Taluks who were victims of

Chickahole tragedy (The quantum of relief provided and its nature) ;

(*b*) whether Government have taken any action to make arrangements for providing relief to those who are put to difficulties as they have no means to construct the roofing of residential houses ;

(*c*) the number of houses and the names of villages in respect of which such action has been taken (talukwise and villagewise information may be furnished) ?

Sri N. HUTCHAMASTHY GOWDA (Minister for Revenue).—

(*a*) The total relief amount spent Rs. 6,26,432-38

1. For free meals Rs. 2,67,866-10
2. Cash relief Rs. 2,67,620-00
3. Materials for construction of Houses (In Kollegal and Yelandur Taluks only). Rs. 36,736-28

The details of wooden materials distributed in Chamarajanagar Taluk :

B. 22,286-00
K. 4,008-00
Ballies 1,528-00

(*b*) The Government have sanctioned cash relief of Rs. 100 for purchase of roofing materials locally and Rs. 200 for purchase of house building materials.

(c) Please see *vide* reply to clause (*b*).

ಶ್ರೀ ಎಂ. ಸಿದ್ದಮಾದಯ್ಯ :—ಚಿಕ್ಕಹೊಳೆ ದುರಂತದಲ್ಲಿ ಕೊಳ್ಳೆಗಾಲ, ಯಳಂದೂರು, ಚಾಮರಾಜನಗರ ತಾಲ್ಲೂಕಿನಲ್ಲಿ ಬಹಳ ಮನೆಗಳು ಕಿತ್ತುಕೊಂಡು ಹೋಗಿರುವುದರಿಂದ ಟೆಂಪರರಿ ಶೆಡ್ಸ್‌ಗಳನ್ನು ಹಾಕಿಕೊಳ್ಳುವುದಕ್ಕೆ ಬೊಂಬು ಮತ್ತು ಗಳ ಸಪ್ಲೈ ಮಾಡಿದ್ದಾರೆ, ಉಳಿದವರಿಗೆ ತೆಂಗಿನಗರಿ ಕೊಡುತ್ತೇವೆಂದು ಹೇಳಿದ್ದೀರಿ, ಅದನ್ನು ಇನ್ನು ಕೊಟ್ಟಿಲ್ಲ, ನಿಧಾನ ವಾಗಿರುವುದಕ್ಕೆ ಕಾರಣವೇನು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ:—ತೆಂಗಿನ ಗರಿ ಸಿಕ್ಕದೇ ಇರುವುದರಿಂದ ಅದಕ್ಕೆ ಬದಲಾಗಿ 100 ರೂಪಾಯಿ ಕ್ಯಾಷ್ ಗ್ರಾಂಟ್ ಕೊಟ್ಟು ಅದನ್ನು ಕಟ್ಟಿಸಿಕೊಳ್ಳಬಹುದೆಂದು ಆ ರೀತಿ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಎಂ. ಸಿದ್ಧಮಾದಯ್ಯ :—ಇನ್ನು ಸಹ ತಲುಪಿಲ್ಲ, ಕೊಟ್ಟಿರುವ 100 ರೂಪಾಯಿ ಬೇಗನೆ ಕೊಡುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಹುಚ್ಚಮಾಸ್ತಿಗೌಡ :—ಎಷ್ಟು ತಲುಪಿದೆ ಎಂಬ ವಿವರ ತರಿಸಿಕೊಂಡು ಇನ್ನು ತಲುಪದೆ ಇರುವವರಿಗೆ ಬೇಗನೆ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಸಿದ್ದಮಾದಯ್ಯ :—ನೀರಿನಲ್ಲಿ ಸಣ್ಣ ರೈತರ ಮನೆಗಳು ಕೊಚ್ಚಿ ಹೋಗಿರುವ ವರಿಗೆ 500 ರೂಪಾಯಿ ಪರಿಹಾರ ನೀಡುವುದಾಗಿ ತಾವು ಪ್ರವಾಸ ಕೈಗೊಂಡಿದ್ದಾಗ ಅಪ್ಪಣೆ ಮಾಡಿದ್ದಿರಿ. ಇದುವರೆಗೂ ಯಾವುದೂ ಕೊಟ್ಟಿಲ್ಲ ಬೇಗನೆ ತಾವು ಕೊಡಿಸಿಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈಗಾಗಲೇ ಕ್ಯಾಷ್ ರಿಲೀಫ್ 2,67,620.00 ರೂಪಾಯಿ ಕೊಟ್ಟಿದೆ. ಇನ್ನು ಹೆಚ್ಚಾಗಿ ಬೇಕು ಎಂದು ಕೇಳಿದ್ದೀರಿ. 5 ಲಕ್ಷ ರೂಪಾಯಿ ಮತ್ತೆ ಮಂಜೂರು ಆಗಿದೆ ಅದನ್ನು ಹಂಚಿಕೆಗೆ ವ್ಯವಸ್ಥೆ ಮಾಡಿದೆ.

ಶ್ರೀ ಎಂ. ಸಿದ್ದಮಾದಯ್ಯ :—(ಈ) ಪ್ರಶ್ನೆಗೆ (ಆ) ಉತ್ತರ ನೋಡಿ ಎಂದು ಹೇಳಿದ್ದೀರಿ. ಗೌರ್ನಮೆಂಟ್‌ನವರು ಎಷ್ಟೆಷ್ಟು ದುಡ್ಡು ಕೊಟ್ಟಿದ್ದೀರಿ ಎನ್ನುವುದನ್ನು ಮಾತ್ರ ಹೇಳಿದ್ದೀರಿ, ಆದರೆ ಯಾವ ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ಮನೆಗಳು ಕೊಚ್ಚಿಕೊಂಡು ಹೋಗಿವೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—

ಕೊಳ್ಳೇಗಾಲ ತಾಲ್ಲೂಕ್

| ಗ್ರಾಮ | ಕ್ರಮ ಕೈಗೊಂಡಿರುವ ಮನೆಗಳ ಸಂಖ್ಯೆ. |
|---|---|
| ಮಳ್ಳೂರು | 37 |
| ಎಡನೊಳೆ | 12 |
| ಕೊಳ್ಳೇಗಾಲ | 12 |
| ಹಂಪಾಪುರ | 1 |
| ಉತ್ತಂಬಳ್ಳಿ ಮೋಳ | 41 |
| ಒಟ್ಟು | 103 |

ಯಳಂದೂರು ತಾಲ್ಲೂಕ್

| | ಹಣ ಸಹಾಯ ಪಡೆದ ಮನೆಗಳು | ಮನೆ ಕಟ್ಟುವ ಸಾಮಾನುಗಳು |
|---|---|---|
| ಯರಿಯಾರು | 153 | 77 |
| ಬನ್ನಿಸಾರಿಗೆ | 106 | 58 |
| ಅಪಳಕಂದಳ್ಳಿ | 15 | — |
| ದುಯಂ ಕಂದಳ್ಳಿ | 13 | 2 |
| ಮದ್ದೂರು | 75 | 76 |
| ಯಳಂದೂರು | 255 | 100 |
| ಆಗರ | 174 | 64 |
| ಮೂಂಬಳ್ಳಿ | 220 | 38 |
| ಕೃಷ್ಣಾಪುರ | 32 | 6 |
| ಕನಕಳ್ಳಿ | 31 | 8 |

ಎಳಂದೂರು ತಾಲ್ಲೂಕ್ (ಮುಂದುವರಿದುದು)

| | ಹಣ ಸಹಾಯ ಪಡೆದ ಮನೆಗಳು | ಮನೆ ಕಟ್ಟುವ ಸಾಮಾನುಗಳು |
|---|---|---|
| ಬೂದಿತಿಟ್ಟು | 34 | 34 |
| ಉಪ್ಪಿನ ಮಾಳಿ | 49 | 6 |
| ಗಣಿಗನೂರು | 31 | 22 |
| ಚಾಮಲಾಪುರ | 13 | 20 |
| ಅಂಬಳಿ | 96 | 55 |
| ವೈ. ಕೆ. ಮಾಳಿ | 47 | 29 |
| ಟಿ. ಹೊಸೂರು | 1 | — |

ಚಾಮರಾಜನಗರ ತಾಲ್ಲೂಕ್

| | ಕಷ್ಟಕ್ಕೆ ಈಡಾದ ಕುಟುಂಬಗಳು |
|---|---|
| ಕೂಡ್ಲೂರು | 146 |
| ಕನ್ನೇಗಾಲ | 126 |
| ಹೊಮ್ಮ | 17 |
| ಕೂಡಿಮಲೆ | 34 |
| ಅಂಕನ ಸೆಟ್ಟಿಪುರ | 6 |
| ಬೋದಿ ತೆಟ್ಟು | 19 |
| ಹೆಚ್. ಡಿ. ಫಾರೆಸ್ಟ್ | 10 |
| ಹೆಬ್ಬೂರು | 56 |
| ಮಸನಪುರ | 57 |
| ಆಲೂರು | 3 |
| ಸೂತೂರು | 1 |
| ಡೋಲೀಪುರ | 1 |
| ಚಂದಕವಾಡಿ | 7 |
| ಕಾನಿಕರೆ | 8 |
| ಬ್ಯಾಡಮುಡಲು | 2 |
| ಕಂಪನಪುರ, ಸರಗೂರು, ಗೋಲಿಪುರ. | — |

ಶ್ರೀ. ಎಂ. ಸಿದ್ದಮಾದಯ್ಯ:—ಹೊಳೆಯ ದುರಂತದ ಪರಿಣಾಮವಾಗಿ ಕೊಚ್ಚಿಹೋಗಿರುವ ರೈತರಿಗೆ ಪರಿಹಾರ ಕೊಡುವುದಾಗಿ ತಿಳಿಸಿದ್ದಾರೆ. ಅವರಲ್ಲಿ ಕೆಲವರು ಇನ್ಸ್‌ಪೆಕ್ಟೆಂಟ್ ಆಫೀಸರು ಕೆಲವು ಮನೆಗಳಿಗೆ ಹೋಗದೇ ಇರಬಹುದು. ಕೆಲವು ಕಡೆ ಪ್ರವಾಹದಿಂದ ತೀವ್ರವಾಗಿ ಗೋಡೆಗಳು ಕುಸಿದುಕೊಂಡು ಹೋಗಿವೆ. ಅನಾನುಕೂಲವಾದುದರಿಂದ ಮನೆಗಳನ್ನು ಕೆಲವರು ಬಿಟ್ಟು ಹೋಗಿದ್ದಾರೆ. ಅಂಥ ಮನೆಯವರಿಗೆ ಪರಿಹಾರ ಕೊಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಜಿಲ್ಲಾಧಿಕಾರಿಗಳಿಗೆ ತಿಳಿಸಿ, ಪಟ್ಟಿಯಲ್ಲಿ ಬಿಟ್ಟು ಹೋಗಿರತಕ್ಕ ಮನೆಗಳು ಇದ್ದರೆ ಅವುಗಳನ್ನು ಕೂಡ ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ತಿಳಿಸುತ್ತೇನೆ.